ಒತ್ತಾಯ ಮಾಡುತ್ತೇವೆ. ಬಸವನಗೌಡ ಪಾಟೀಲರು ಕುಡಿಯುವ ನೀರಿನ ಬಗ್ಗೆ ಹೇಳಿದರು. ನಿನ್ನೆ ನಾನು ಹುಬ್ಬಳ್ಳಿಯಲ್ಲಿ ಸಭೆ ನಡೆಸಿ ಉಗಾರ ಬ್ಯಾರೇಜಿನಿಂದ 80 ಕಿಮೀ ಹೋಗುವ ಒಂದು ಕೆನಾಲಿದೆ. ಅದರಲ್ಲಿ ನೂರು ಕ್ಯೂಸೆಕ್ಸ್ ನೀರನ್ನು ಬಿಜಾಪುರ ಜಿಲ್ಲೆಗೆ ಕೊಡಬೇಕೆಂದು ಘಟಪ್ರಭಾದ ಚೀಫ್ ಇಂಜಿನಿಯರ್‌ಗೆ ಹೇಳಿದ್ದೇನೆ. ಈಗ ನನಗೆ ಮೆಸೇಜ್ ಬಂತು, ರಾತ್ರೀನೇ ನೀರು ಬಿಟ್ಟಿದ್ದಾರೆ, 100 ಕ್ಯೂಸೆಕ್ಸ್ ನೀರು ಬರಲು ಎರಡು ಮೂರು ದಿವಸ ಬೇಕಾಗುತ್ತದೆ. ಬಿಜಾಪುರಕ್ಕೆ ಕುಡಿಯುವ ನೀರಿಗೆ ತಾಪತ್ರಯವಿಲ್ಲ. ಅಳಂಬವಾಡಿ, ದೂದಗಂಗಾ ಕೊಯ್ನಾಗಳಿಗೆಂದು ನಾವೇನು ಹಣ ಕೊಟ್ಟಿದ್ದೇವೆ ಆದರೂ ನೀರು ಏಕೆ ಬಿಡಲಿಲ್ಲವೆಂದು ಮುಖ್ಯಮಂತ್ರಿಗಳಿಂದಲೇ ಮಾತನಾಡಿಸುತ್ತೇನೆ. ಕೂಡಲೇ ತುರ್ತು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಸವನಗೌಡ ರಾ. ಪಾಟೀಲ್ : ಕೊಯ್ನ ನೀರು ಬಿಡದೇ ಹೋದರೆ ಉಗಾರದ ಸುತ್ತ ಮುತ್ತ ಇರುವ ರೈತರು ಯಾವುದೇ ಪರಿಸ್ಥಿತಿಯಲ್ಲಿ ಗೇಟ್ ತೆಗೆಯಲು ಅವಕಾಶ ಕೊಡುವುದಿಲ್ಲ. ನಮ್ಮ ಸರ್ಕಾರವೇನೋ ಹಣ ತುಂಬಿದೆ ಎಂದು ಹೇಳುತ್ತದೆ, ಆದರೆ ಬಿಜಾಪುರದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪೂನಾದಲ್ಲಿರುವ ಚೀಫ್ ಇಂಜಿನಿಯರ್ ಜೊತೆ ಮಾತನಾಡಿದಾಗ ಕರ್ನಾಟಕ ಸರ್ಕಾರದಿಂದ ಇನ್ನೂ ನಮಗೆ ಹಣ ಬಂದಿಲ್ಲ ನಾವು ನೀರು ಕೊಡುವುದಿಲ್ಲ ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ಮಂತ್ರಿಗಳು ಏನು ಉತ್ತರ ಹೇಳಿದರು ಎಂದು ಕೇಳಿಸಿಕೊಳ್ಳುವ ಸೌಜನ್ಯ ಇಲ್ಲವೇ ನಿಮಗೆ? ಇನ್ನೆರಡು ಗಂಟೆಯೊಳಗೆ ಅಲ್ಲಿನ ಯಾರಿಗೆ ಬೇಕಾದರೂ ಮಾತನಾಡಿಸಿ ನೀರು ಬಿಡಿಸುವ ಕ್ರಮ ತೆಗೆದುಕೊಳ್ಳುತ್ತೇನೆಂದರೂ ಮತ್ತೆ ಮತ್ತೆ ಮಾತನಾಡುತ್ತೀರಲ್ಲಾ. ನಿಮಗೆ ಭಾಷೆ ಅರ್ಥವಾಗುವುದಿಲ್ಲ ಕುಳಿತುಕೊಳ್ಳಿ ನಾವೇನೂ ಮಾಡುವುದಕ್ಕಾಗುವುದಿಲ್ಲ.

ದ. ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ ಕ್ಷೇತ್ರದ ನರಸಿಂಹ ದೇವರಿಗೂ ಸಂಪ್ರದಾಯಿಕ ಉತ್ಸವ

ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ದಕ್ಷಿಣ ಕನ್ನಡ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಶ್ರೀ ಸುಬ್ರಹ್ಮಣ್ಯದಲ್ಲಿ ಸುಬ್ರಹ್ಮಣ್ಯ ದೇವರ ಮತ್ತು ಸ್ಥಳೀಯ ಮಠದ ನರಸಿಂಹ ದೇವರ ಉತ್ಸವ ಜೊತೆಯಾಗಿ ನಡೆಯುವುದು ಸಂಪ್ರದಾಯ ನೂರಾರು ವರ್ಷಗಳಿಂದ ನರಸಿಂಹದೇವರ ಮೂರ್ತಿಯನ್ನು ಸುಬ್ರಹ್ಮಣ್ಯದೇವರ ರಥದಲ್ಲಿಟ್ಟು ಮೆರವಣಿಗೆ ನಡೆಸುವ ಸಂಪ್ರದಾಯ ರೂಢಿಯಲ್ಲಿದೆ. ಕಳೆದ ವರ್ಷ ಈ ರೂಢಿಯ ಆಚರಣೆಗೆ ಆಕ್ಷೇಪ ಆರಂಭವಾದಾಗ, ಊರಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ಹಿರಿಯ ಮಠಾಧೀಶರು ಸ್ಥಳೀಯ ನಾಗರೀಕರು ಸೇರಿ ಪರಿಣಾಮ ವಿಪರೀತಕ್ಕೆ ಹೋಗದಂತೆ ತಡೆದು ಉತ್ಸವ ನಡೆಸಿದರು.

ಈ ಬಾರಿ ಮತ್ತೆ ಸುಬ್ರಹ್ಮಣ್ಯ ದೇವರಿಗೂ ಮತ್ತು ಮಠದ ನರಸಿಂಹ ದೇವರಿಗೂ ಒಂದು ರಥದಲ್ಲಿ ಮೆರವಣಿಗೆ ಬಿಡುವುದಿಲ್ಲ ಎಂಬ ಮಾತು ಆಡಳಿತ ವರ್ಗದ ಮುಖ್ಯಸ್ಥದಿಂದ ಬಹಿರಂಗವಾಗಿ ಘೋಷಿಸಲ್ಪಟ್ಟಿದೆ. ಇದರಿಂದ ಮನನೊಂದ ಪೂಜ್ಯ ಪೇಜಾವರ ಮಠಾದೀಶರಾದ ವಿಶ್ವೇಶ್ವರ ತೀರ್ಥ ಶ್ರೀ ಪಾದಂಗಳವರು ತಾನು ನ್ಯಾಯಕ್ಕಾಗಿ ಶ್ರೀಮಠಕ್ಕೂ ದೇವಸ್ಥಾನಕ್ಕೂ ಮಧ್ಯೆ ಇದ್ದ ಸಂಪ್ರದಾಯಬದ್ಧ

ಸೌಹಾರ್ದವನ್ನು ಕೆಡಿಸುವುದರ ವಿರುದ್ಧ 10ನೇ ತಾರೀಖಿನಿಂದ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಘೋಷಿಸಿದ್ದಾರೆ. ಹಾಗೇನಾದರೂ ಆದರೇ ಅದರಿಂದ ಧಾರ್ಮಿಕ ಕ್ಷೇತ್ರದಲ್ಲಿ ಕೋಲಾಹಲ ಉಂಟಾಗುವುದು ಸಮಾಜದ ಸಾಮರಸ್ಯ ನಷ್ಟವಾಗುವುದು. ಆದ್ದರಿಂದ ಸರ್ಕಾರ ಕೂಡಲೇ ಮಧ್ಯೆ ಪ್ರವೇಶ ಮಾಡಿ ಪೂರ್ವಾಚಾರವನ್ನು ಬೆಂಬಲಿಸಿ ಅನುಚಿತ ಘಟನೆಗೆ ತಡೆಹಾಕಬೇಕೆಂದು ಈ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇವೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) : ಅಧ್ಯಕ್ಷರೇ, ಯಾವ ಪದ್ಧತಿಯಲ್ಲಿ ಇದು ನಡೆಯಬೇಕು ಹಾಗೆಯೇ ನಡೆಸುವ ಬಗ್ಗೆ ಸುಬ್ರಹ್ಮಣ್ಯದೇವಸ್ಥಾನದ ಆಡಳಿತ ವರ್ಗಕ್ಕೆ ನಾನು ವಿವರಣೆ ನೀಡಿದ್ದೇನೆ. ಏನೂ ತಾರತಮ್ಯ ಮಾಡುವ ಅವಶ್ಯಕತೆ ಇಲ್ಲ. ವೈಶಾಖ ಶುದ್ಧ 14 ರಂದು ಏನು ನರಸಿಂಹಜಯಂತಿ ಮಾಡುತ್ತೇವೆ, ಅದಕ್ಕೆ ದೇವಸ್ಥಾನ ಕಡೆಯಿಂದ ಯಾವುದೇ ಅಭ್ಯಂತರವಿಲ್ಲ. ಯಾವ ರೀತಿ ವಹಿವಾಟಿದೆ ಅದೇ ಪ್ರಕಾರ ಎಲ್ಲಾ ಖರ್ಚುಗಳನ್ನೂ ಮಠದವರೇ ವಹಿಸಿಕೊಳ್ಳುವ ವ್ಯವಸ್ಥೆ ಇದೆ. ಆ ಮಠದಿಂದ ಎಲ್ಲಾ ಸಾಮಾನು ಕೊಟ್ಟರೆ ಅಲ್ಲಿ ನೈವೇದ್ಯಮೃಷ್ಟಾನ್ನ ಮಾಡಿ ನರಸಿಂಹಸ್ವಾಮಿಯ ಸಾನ್ನಿಧ್ಯದಲ್ಲಿ ಭಿಕ್ಷೆಯ ಸಮಾರೋಪವನ್ನು ವಹಿಸಿಕೊಂಡು ಎರಡು ದೇವರುಗಳನ್ನೂ ಅಡ್ಡಪಲ್ಲಕ್ಕಿ ಕೂರಿಸಿ ನಮ್ಮ ಮೈದಾನದಲ್ಲಿ ಏಳು ಸುತ್ತು ಮೆರವಣಿಗೆ ಮಾಡಲಿಕ್ಕೆ ಎಲ್ಲಾ ವ್ಯವಸ್ಥೆ ಮಾಡಿದ್ದಾರೆ ಆಡಳಿತ ವರ್ಗ ಇದರಲ್ಲಿ ಯಾವ ಲೋಪದೋಷ ಮಾಡಿಲ್ಲ. ಪೇಜಾವರ ಸ್ವಾಮಿಗಳು ಉಪವಾಸ ಕೂರುತ್ತಾರೆಂಬ ಸಮಾಚಾರ ನಮ್ಮ ಗಮನಕ್ಕೆ ಬಂದಿಲ್ಲ. ಆ ಮಟ್ಟಕ್ಕೆ ಇದನ್ನು ಒಯ್ಯದಂತೆ ಯಥಾವತ್ತಾಗಿ ಸಮಾರಂಭ ಮಾಡುತ್ತೇವೆಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಸುರೇಶ್ ಕುಮಾರ್ ಲೈವ್‌ಬ್ಯಾಂಡ್.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ಸುರೇಶ್ ಕುಮಾರ್ ಲೈವ್‌ಬ್ಯಾಂಡ್ ಎಂದರೆ ಬೇರೆ ಅರ್ಥವಾಗಿಬಿಡುತ್ತದೆ.

MR. SPEAKER : It is neither Suresh Kumar's nor Ramesh Kumar's.

ರಾಜಾಜಿನಗರದ ಲೈವ್ ಬ್ಯಾಂಡ್‌ನಲ್ಲಿ ಕೊಲೆಯಾದ ಪ್ರಸ್ತಾಪ

+ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಸನ್ಮಾನ್ಯ ಸಭಾಧ್ಯಕ್ಷರೇ, ನಿನ್ನೆಯಿಂದ ಬೆಂಗಳೂರಿನಲ್ಲಿ ಪೋಲೀಸ್‌ನವರು ಬಹಳ ಚುರುಕಾಗಿಬಿಟ್ಟಿದ್ದಾರೆ. ನಿನ್ನೆ ಬೆಳಿಗ್ಗೆಯಿಂದ ರೈಡ್ ಮಾಡಿ ಸುಮಾರು 23 ಕೇಸ್‌ಗಳನ್ನು ಬುಕ್ ಮಾಡಿದ್ದಾರೆ. ಈ ರೀತಿ ಚಟುವಟಿಕೆ ಮಾಡಲಿಕ್ಕೆ ಒಂದು ಕೊಲೆ ಆಗತ್ಯವಿತ್ತೇ ಎನ್ನುವುದೊಂದು ಪ್ರಶ್ನೆ. ಬೆಂಗಳೂರಿನಲ್ಲಿ ಅನೇಕ ಪಿಡುಗುಗಳಿವೆ. ಅದರಲ್ಲಿ ಈ ಲೈವ್‌ಬ್ಯಾಂಡ್ ಒಂದು. ಹಿಂದೆ ಒಬ್ಬರು ಪೋಲೀಸ್ ಕಮೀಷನರ್‌ರವರು ಬೆಂಗಳೂರನ್ನು vices city ಮಾಡಬೇಕೆಂದು ಹೊರಟಿದ್ದರು. ವಿಡಿಯೊ ಗೇಮ್, ಲೈವ್ ಬ್ಯಾಂಡ್ ಅಂಡ್ ರಿಕ್ರಿಯೇಷನ್ ಕ್ಲಬ್, ಇವತ್ತು ಆ vices city ಗೆ ನಾವು ಕ್ಯಾಪಿಟಲ್ ಮಾಡಿಬಿಟ್ಟಿದ್ದೇವೆ. ಮೊನ್ನೆ ರಾಜಾಜಿನಗರದ ಡಾ॥ ರಾಜ್‌ಕುಮಾರ್ ರಸ್ತೆಯಲ್ಲಿ ಆ ಲೈವ್‌ಬ್ಯಾಂಡ್ ಕೇಂದ್ರ ಏನು ಇದೆ, ಅದರಲ್ಲಿ ಸಂಭವಿಸಿದ